## ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
## KARNATAKA LEGISLATIVE ASSEMBLY, RESEARCH AND REFERENCE BRANCH

### ಪತ್ರಿಕಾ ತುಣುಕುಗಳು
### PAPER CLIPPINGS

26

ಇಲಾಖೆ / ವಿಷಯ : DEPARTMENT / SUBJECT: ರಾಜಕೀಯ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ    ದಿನಾಂಕ : DATE : 1-12-2021

# ಸಿದ್ದು ಸವದಿ ಎಳೆದಾಡಿದ್ದ ಪುರಸಭೆ ಸದಸ್ಯೆ ಚಾಂದಿನಿಗೆ ಗರ್ಭಪಾತ!

## ನ.9ರ ಅಧ್ಯಕ್ಷ, ಉಪಾಧ್ಯಕ್ಷ ಚುನಾವಣೆ ವೇಳೆ ಘಟನೆ

**ಬಾಗಲಕೋಟೆ:** ಜಿಲ್ಲೆಯ ಮಹಾಲಿಂಗಪುರದ ಪುರಸಭೆಯಲ್ಲಿ ನ.9ರಂದು ಪುರಸಭೆ ಅಧ್ಯಕ್ಷ-ಉಪಾಧ್ಯಕ್ಷ ಚುನಾವಣೆ ವೇಳೆ ಶಾಸಕ ಸಿದ್ದು ಸವದಿ ಅವರು ಎಳೆದಾಡಿದ್ದ ಮಹಿಳಾ ಸದಸ್ಯೆ ಚಾಂದಿನಿ ನಾಯಕ್ ಅವರಿಗೆ ಗರ್ಭಪಾತವಾಗಿರುವ ವಿಷಯ ತಡವಾಗಿ ಬೆಳಕಿಗೆ ಬಂದಿದೆ.

ನ.9ರಂದು ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಿಗದಿಯಾಗಿತ್ತು. ಈ ವೇಳೆ ಅಧ್ಯಕ್ಷ ಸ್ಥಾನಕ್ಕೆ ಬೇಡಿಕೆಯಿಟ್ಟಿದ್ದ ಬಿಜೆಪಿಯ ಮೂವರು ಸದಸ್ಯೆಯರು, ತಮಗೆ ಅವಕಾಶ ಸಿಗದ ಕಾರಣ ಕಾಂಗ್ರೆಸ್‌ಗೆ ಬೆಂಬಲ ನೀಡಲು ಮುಂದಾಗಿದ್ದರು. ವಿಷಯ ಗಮನಕ್ಕೆ ಬರುತ್ತಿದ್ದಂತೆ ತೇರದಾಳ ಶಾಸಕ ಸಿದ್ದು ಸವದಿ ಹಾಗೂ ಬೆಂಬಲಿಗರು ಬಿಜೆಪಿ ಸದಸ್ಯರಾದ ಗೋದಾವರಿ, ಚಾಂದಿನಿ, ಸವಿತಾ ,ಹುರಕಡ್ಲಿ ಅವರನ್ನು ಪುರಸಭೆ ಆವರಣದಲ್ಲೇ ತಡೆಯಲು ಮುಂದಾಗಿದ್ದರು. ಈ ವಿಡಿಯೋ ವೈರಲ್ ಆಗಿತ್ತು. ವಾರ್ಡ್ ನಂ.4ರ ಸದಸ್ಯೆ ಚಾಂದಿನಿ ನಾಯಕ್‌ರಿಗೆ ನೂಕಾಟದಿಂದ ಗಾಯಗಳಾಗಿತ್ತು.

**ನನ್ನ ಪತ್ನಿ ಮತದಾನಕ್ಕೆ ಹೊರಟಿದ್ದಳು. ಈ ವೇಳೆ ಶಾಸಕರು ಹಾಗೂ ಬೆಂಬಲಿಗರು ತಳ್ಳಾಡಿ, ನೂಕಿದರು. ಇದರಿಂದ ನನ್ನ ಪತ್ನಿ ಕೆಳಗೆ ಬಿದ್ದಳು. ಅವಳು ಗರ್ಭಿಣಿ ಆಗಿದ್ದಳು. ಈಗ ಅವಳಿಗೆ ಗರ್ಭಪಾತ ಆಗಿದೆ. ಕೋರ್ಟ್‌ಗೆ ಹೋಗುತ್ತೇವೆ.**

• **ನಾಗೇಶ್ ನಾಯಕ**, ಚಾಂದಿನಿ ನಾಯಕ್ ಪತಿ

**ಗರ್ಭಪಾತ ಆಗಿರುವುದು ಕೊಲೆಗೆ ಸಮಾನವಾಗಿದ್ದರೂ ಸರ್ಕಾರ ಯಾವುದೇ ಕ್ರಮ ಕೈಗೊಳ್ಳದೆ ಕುಳಿತಿದೆ. ಮುಖ್ಯಮಂತ್ರಿಗಳು ನಿಷ್ಕ್ರಿಯರಾಗಿದ್ದಾರೆ. ಇಂತಹ ಶಾಸಕರನ್ನು ಸರ್ಕಾರ ಹಾಗೂ ಪಕ್ಷದಿಂದ ಹೊರಗಿಡಬೇಕು.**

• **ಉಮಾಶ್ರೀ**, ಮಾಜಿ ಸಚಿವೆ